ಹೋಗೋಣ...' ಎನ್ನುತ್ತ ಅವರಿಗೆ ಊಟ ಹಾಕುವಂತೆ ಯಾರಿಗೋ ಹೇಳಿ ಸೊಸೆಯ ಜೊತೆ ಒಳಗೆ ಹೋದಳು ದೊರೆಸಾನಿ.

'ಬೊಂದಿ ತಿನ್ನುತ್ತೀಯೇನೋ... ನೀನು ಎಲ್ಲಿ ಬೇಡ ಎನ್ನುತ್ತೀಯ... ನನಗಂತೂ ಬೇಡ' ನಗುತ್ತ ಹೇಳಿದನು ಬಾಲಯ್ಯ.

'ಏ ಈಗಲೇ ಏನು ತಿನ್ನಕ್ಕಾಗುತ್ತೆ... ಬರೋವಾಗಲೇ ತಿಂದಿದ್ದಾಗಿದೆ. ಊರು ನೋಡಿಬರೋಣ ನಡಿ... ಇಲ್ಲಿ ಬಂದು ಬಹಳ ದಿನ ಆಯಿತು...' ಎಂದನು ಬೊಂದಯ.

'ಈ ಕತ್ತಲಿನಲ್ಲಿ ಏನು ನೋಡುತ್ತೀಯೋ... ಇಷ್ಟಕ್ಕೂ ಈ ಊರಿನಲ್ಲೇನಿದೆ... ಇದೇನು ಪಟ್ಟಣವಾ...' ಕೇಳಿದನು ಬಾಲಯ್ಯ.

'ನಕ್ಸಲರಿರುತ್ತಾರಂತಲ್ಲವಾ... ಹೇಗಿರುತ್ತಾರೋ ನೋಡೋಣ...' ಎಂದನು ಬೊಂದಯ.

'ಊಂ... ನೀನು ಬಂದಿದ್ದೀಯೆಂದು ನಿನ್ನೆದುರಿಗೆ ಬಂದುಬಿಡುತ್ತಾರೆ ನೋಡು ಮತ್ತೆ... ಅವರೂ ನಮ್ಮ ಹಾಗೇ ಮನುಷ್ಯರೇ... ಗುಡ್ಡಗಳಲ್ಲಿಯೋ, ಮರಗಳಲ್ಲಿಯೋ ಇರುತ್ತಾರೆ. ಆದರೂ, ನಮ್ಮ ದೊರೆಗಳು ಒಳ್ಳೆಯವರು ಕಣೋ... ಇವರನ್ನು ಆ ನಕ್ಸಲ ಅಣ್ಣಂದಿರು ಏನೂ ಅನ್ನುವುದಿಲ್ಲ...' ಎಂದ.

'ನೀನು ಬರುತ್ತೀಯಾ ಇಲ್ಲವಾ... ಅದು ಹೇಳು ಮೊದಲು. ಬೇಗ ವಾಪಸು ಬರೋಣ' ಕಾರು ಹತ್ತುತ್ತ ಹೇಳಿದನು.

'ಏಯ್... ಕಾರು ಒರೆಸಿದ್ದೇ ಹೊರತು ಯಾವತ್ತೂ ಹತ್ತಿರಲಿಲ್ಲ. ನಿನ್ನನ್ನು ಕೇಳಿಕೊಂಡರೆ ಕಿವಿ ಮೇಲೆ ಹಾಕಿಕೊಳ್ಳಲೇ ಇರಲಿಲ್ಲ. ಅಪರೂಪಕ್ಕೆ ಇವತ್ತು ಅವಕಾಶ ದೊರೆತಿದೆ... ಬಿಡುತ್ತೀನಾ... ಆದರೆ ಬೇಗ ಬರಬೇಕು ನಡಿ ಹೋಗೋಣ...' ಎನ್ನುತ್ತ ಹತ್ತಿ ಕುಳಿತ ಬಾಲಯ್ಯ.

ತುಂತುರು ಹನಿ ಬೀಳುತ್ತಲೇ ಇದೆ. ಗಾಳಿ ತಣ್ಣಗೆ ಕೊರೆಯುತ್ತಿದೆ. ಅಲ್ಲಲ್ಲಿ ಬೀದಿ ದೀಪಗಳು ಬೆಳಗುತ್ತಿವೆ. ರಸ್ತೆಯಲ್ಲಿ ತಲೆ ಮೇಲೆ ಗುಬುರು ಹಾಕಿಕೊಂಡ, ಛತ್ರಿ ಹಿಡಿದು ಒಂದಿಬ್ಬರು ಓಡಾಡುತ್ತಿರುವುದು ಬಿಟ್ಟರೆ ಹೆಚ್ಚು ಜನಸಂಚಾರವಿಲ್ಲ. ತಗ್ಗುಗಳು ಹೆಚ್ಚಿರುವ ಮಣ್ಣಿನ ರಸ್ತೆ. ಒಂದೊಂದು ಕಡೆ ಚಕ್ರಗಳು ಮುಳುಗುವಷ್ಟು ಕೆಸರು. ಸೆಕೆಂಡ್ ಗೇರ್ ಇಲ್ಲದೆ ಕಾರು ಚಲಿಸುತ್ತಿಲ್ಲ. ಮುಖ್ಯ ತಿರುವುಗಳ ಬಳಿ ಇಕ್ಕಟ್ಟಾಗಿದ್ದು ಗಾಡಿ ತಿರುಗಿಸುವುದು ಕಷ್ಟವಾಗುತ್ತಿದೆ. ಬರುವುದೇನೋ ಬಂದುಬಿಟ್ಟ. ಯಾಕಾದರೂ ಬಂದೆನೋ ಎಂದುಕೊಳ್ಳುತ್ತಿದ್ದಾನೆ ಬೊಂದಯ. ಬಾಲಯ್ಯ ಮಾತ್ರ ಖುಷಿಯಿಂದ ಸುತ್ತಮುತ್ತ ನೋಡುತ್ತಿದ್ದಾನೆ.

ಅಂತೂ ಇಂತೂ ಕಾರು ಊರು ದಾಟಿತು. 'ಇಷ್ಟೇ ಕಣೋ ಊರು. ಹಿಂದಕ್ಕೆ ತಿರುಗಿಸಿಕೋ, ಬಂದ ದಾರಿಯಲ್ಲೇ ಹೋಗೋಣ...' ಹೇಳಿದನು ಬಾಲಯ್ಯ.

'ಈ ಸಂದಿಯಲ್ಲಿ ಗಾಡಿ ಹೋಗುತ್ತದಲ್ಲವಾ...' ಕೇಳಿದನು ಬೊಂದಯ.

'ಊಂ... ಹೋಗುತ್ತದೆ. ಅಲ್ಲೆಲ್ಲ ಮಾದಿಗರ ಮನೆಗಳೇ...'

'ಆದರೇನಾಯಿತು ಊರಲ್ಲವಾ... ಹೋಗೋಣ...' ಎನ್ನುತ್ತಾ ಕಾರನ್ನು ಆ ಕಡೆಗೇ ತಿರುಗಿಸಿದ ಬೊಂದಯ.

ಅಲ್ಲಿ ಬೀದಿ ದೀಪಗಳೂ ಇಲ್ಲ. ಎಲ್ಲೆಡೆ ಕತ್ತಲು ತುಂಬಿದೆ. ಕಾರಿನ ಶಬ್ದ ಕೇಳಿ ಕೆಲವರು ಕಾರಿನ ಲೈಟ್ ಬೆಳಕನ್ನು ಕಂಡು ಕೆಲವರು ಹೊರಗೆ ಬಂದು ವಿಚಿತ್ರವಾಗಿ ನೋಡುತ್ತಿದ್ದಾರೆ. ನಾಲ್ಕು ಮನೆ ದಾಟಿದ ನಂತರ ಒಂದು ಮನೆಯ ಮುಂದೆ ನಾಲ್ಕೈದು ಜನ ನಿಂತಿದ್ದಾರೆ.

'ಅಗೋ... ಕಾಕಾ... ಅಣ್ಣಂದಿರೇನಾ...' ಆಸಕ್ತಿಯಿಂದ ಕೇಳಿದನು ಬೊಂದಯ. ಬಾಲಯ್ಯನಿಗೆ ಸ್ವಲ್ಪ ಭಯವಾಯಿತು. ಆತಂಕದಿಂದ ಪಕ್ಕಕ್ಕೆ ನೋಡಿ ಧ್ವನಿ ತಗ್ಗಿಸಿ, 'ಅಣ್ಣಂದಿರೂ ಇಲ್ಲ ತಮ್ಮಂದಿರೂ